| 19. | ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸ್ವಯಂಸೇವಕರ ಸಹಕಾರ | 9661 | 1214 | 10875 |
| 20. | ಶಿವರಾತ್ರಿ ಸಂದರ್ಭದಲ್ಲಿ ಪಾದಯಾತ್ರಿಗಳಿಗೆ ನೆರವು | 91 | 15 | 106 |
| 21 | ಸ್ವಯಂಸೇವಕರ ಡ್ರೈರೆಕ್ಟರಿ | 83 | 80 | 163 |
| 22 | ಸ್ವಯಂಸೇವಕರಿಗೆ ವಿಮಾ ಸೌಲಭ್ಯ | 32,70,676 | 2,72,000 | |
| 23 | ಸ್ವಯಂಸೇವಕರಿಗೆ ಯೋಜನೆಯಿಂದ ಆರ್ಥಿಕ ಸಹಕಾರ | 1,47,565 | – | 1,47,565 |

| | | | | |
|---|---|---|---|---|
| 24 | ಆಪದ್‌ಮಿತ್ರ ತರಬೇತಿ ಪಡೆದವರು | 49 | 11 | 60 |
| 25 | ಗುರುತಿಸಲ್ಪಟ್ಟ ಶೌರ್ಯ ಸಾಧಕರು | 75 | 5 | 80 |
| 26 | ವಿಪತ್ತು ನಿರ್ವಹಣಾ ಪ್ರಾಧಿಕಾರದ ಭೇಟಿ | 66 | 6 | 72 |
| 27 | ಅಗ್ನಿಶಾಮಕ ಮುಖ್ಯಸ್ಥರ ಕ್ಷೇತ್ರ ಭೇಟಿ | 54 | 41 | 95 |
| 28 | ಪುಸ್ತಕ, ಮಾಹಿತಿ ಪತ್ರ ಮತ್ತು ತರಬೇತಿ ಕೈಪಿಡಿ | 15,610 | – | 15,610 |
| 29 | ಅರಣ್ಯ ಇಲಾಖೆಯ ಮೂಲಕ ತರಬೇತಿ | 2 | 8 | 10 |
| 30 | ಎನ್.ಡಿ.ಆರ್.ಎಫ್ ತರಬೇತಿ | 54 | 17 | 71 |
| 31 | ಪೊಲೀಸ್ ಇಲಾಖೆಯ ಮನವಿಯ ಮೇರೆಗೆ ಟ್ರಾಫಿಕ್ ನಿಯಂತ್ರಣ ಸೇವೆಗಳು | 49 | 163 | 212 |
| 32 | ಪಡೆದ ಪ್ರಶಸ್ತಿಗಳು | 1 | – | 1 |

**2. ಕಾರ್ಯಕ್ರಮ ಅನುಷ್ಠಾನಕ್ಕಾಗಿ ನೀಡಿದ ಸುತ್ತೋಲೆಗಳು**

| ಕ್ರ.ಸಂ. | ಸುತ್ತೋಲೆ ಸಂಖ್ಯೆ | ವಿವರ |
|---|---|---|
| 01 | 29/EDOO/25–26 18.06.2025 | 2025–26ನೇ ಸಾಲಿನ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದ ಅಡಿಯಲ್ಲಿ ಹಣ್ಣಿನ ಗಿಡ ನಾಟಿ ಕಾರ್ಯಕ್ರಮದ ಕುರಿತು. |
| 02 | 30/EDOO/25–26 18.06.2025 | ಶೌರ್ಯ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಖರ್ಚು– ವೆಚ್ಚಗಳ ಕುರಿತು |
| 03 | 62/EDOO/25–26 22.11.2025 | ಶೌರ್ಯ ವಿಪತ್ತು ನಿರ್ವಹಣಾ ಕಾರ್ಯಕ್ರಮದ ಅನುಷ್ಠಾನದಲ್ಲಿ ಗಮನಿಸಬೇಕಾದ ಅಂಶಗಳ ಕುರಿತು. |

**3. ಶೌರ್ಯ ಕಾರ್ಯಕ್ರಮಕ್ಕೆ ಇದುವರೆಗೆ ತಗಲಿದ ಖರ್ಚು– ವೆಚ್ಚಗಳು**

ಶೌರ್ಯ ಕಾರ್ಯಕ್ರಮದಲ್ಲಿ ಸ್ವಯಂಸೇವಕರಿಗೆ ಸೇವಾಭತ್ತೆ, ತರಬೇತಿ, ಸಮವಸ್ತ್ರ, ಪರಿಕರ, ತುರ್ತು ಸ್ಪಂದನೆ, ಊಟೋಪಚಾರ, ಸಂಪನ್ಮೂಲ ವ್ಯಕ್ತಿಗಳ ಖರ್ಚು, ಕ್ರಿಟಿಕಲ್ ಸೌಲಭ್ಯ, ಬ್ಯಾಗ್ ವಿತರಣೆ ಮುಂತಾದ ಖರ್ಚು–ವೆಚ್ಚಗಳನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್‌ನಿಂದ ನೀಡಲಾಗುತ್ತಿದ್ದು, ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ವಿಷಯ | 2020–25 | 2025–26 | ಇದುವರೆಗೆ ಒಟ್ಟು |
|---|---|---|---|---|
| 1. | ಸಂಯೋಜಕರ ತರಬೇತಿ ಮತ್ತು ಸಭೆಗಳು | 71,47,322 | 6,88,434 | 78,35,756 |
| 2. | ಸಮಿತಿ ಸಭೆ ಮತ್ತು ತರಬೇತಿಗಳು | 63,69,001 | 33,49,765 | 97,18,766 |
| 3. | ವಿಪತ್ತು ಮತ್ತು ಸಾಮಾಜಿಕ ಸೇವಾ ಕಾರ್ಯಗಳಿಗೆ ಮಂಜೂರಾತಿ | 84,27,399 | 27,72,740 | 1,12,00,139 |
| 4. | ಸಮವಸ್ತ್ರ ಖರೀದಿ | 47,30,952 | – | 47,30,952 |
| 5. | ಕ್ಯಾಪ್ ಖರೀದಿ | 2,60,000 | – | 2,60,000 |
| 6. | ರಕ್ಷಣಾ ಪರಿಕರಗಳ ಖರ್ಚಿನ ವಿವರ | 1,18,20,566 | – | 1,18,20,566 |
| 7. | ಪುಸ್ತಕ, ಪ್ರಮಾಣ ಪತ್ರ ಮತ್ತು ಇತರ ಮುದ್ರಣ ಬಾಬ್ತು | 7,72,263 | 11,658 | 7,83,921 |

| | | | | |
|---|---|---|---|---|
| 8. | ವಿಮಾ ಕಾರ್ಯಕ್ರಮ | | | |
| 9. | ಇತರೇ ಮಂಜೂರಾತಿ (ಪಾದಯಾತ್ರೆ, ಗಿಡನಾಟಿ, ಮರಣ ಸಾಂತ್ವನ, ಮನೆ ರಚನೆ ಇತ್ಯಾದಿ) | 15,18,048 | 89,682 | 16,07,730 |
| 10. | ಬ್ಯಾಗ್ | – | 43,52,264.00 | 43,52,264.00 |
| | ಒಟ್ಟು | | | |

1. **ಸಂಚಾರಿ ಪೊಲೀಸ್ ಠಾಣೆಯಿಂದ ಸ್ವಯಂಸೇವಕರಿಗೆ ತರಬೇತಿ:** ಶಿರಸಿ, ಬೆಳ್ತಂಗಡಿ, ಗುರುವಾಯನಕೆರೆ ಸಂಚಾರಿ ಪೊಲೀಸ್ ಠಾಣಾ ವತಿಯಿಂದ ಸಂಚಾರಿ ನಿಯಮಗಳ ಬಗ್ಗೆ 350ಕ್ಕೂ ಮಿಕ್ಕಿದ ಸ್ವಯಸೇವಕರಿಗೆ ಮಾಹಿತಿ ನೀಡಲಾಗಿದೆ.





2. **ಪೊಲೀಸ್ ಇಲಾಖೆಗೆ ಭದ್ರತಾ ಕೆಲಸದಲ್ಲಿ ಸಹಕಾರ:** ಖಾನಾಪುರ ತಾಲ್ಲೂಕಿನ ನಂದಗಡ ಶ್ರೀ ಮಹಾಲಕ್ಷ್ಮೀ ದೇವಿಯ ಜಾತ್ರೆಯ ಪ್ರಯುಕ್ತ ವಿಶೇಷ ಜನಸಂದಣಿ ನಿರ್ವಹಿಸಲು ಪೊಲೀಸ್ ಠಾಣೆಯವರು ಶೌರ್ಯ ಸ್ವಯಂಸೇವಕರ ಸಹಕಾರವನ್ನು ಕೋರಿದಂತೆ ನೀಡಲಾಗಿದೆ.

3. **ಟ್ರಾಫಿಕ್ ನಿಯಂತ್ರಣ:** ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆಸಲಾದ ರೈತರತ್ನ ಪ್ರದಾನ ಸಮಾರಂಭದಲ್ಲಿ ಮತ್ತು ಜನಜಾಗೃತಿ ಪ್ರಾದೇಶಿಕ ವಿಭಾಗದ ಶತದಿನೋತ್ಸವ ಕಾರ್ಯಕ್ರಮದಲ್ಲಿ ಟ್ರಾಫಿಕ್ ನಿಯಂತ್ರಣ ಮಾಡಲಾಗಿದೆ.

4. **ಸ್ವಯಂಸೇವೆ:** ರಾಜ್ಯಾದ್ಯಂತ ನಡೆಸಲಾಗುವ ದೇವಸ್ಥಾನದ ಜಾತ್ರೆ, ಸಮಾರಂಭಗಳಲ್ಲಿ ಶೌರ್ಯ ಸ್ವಯಂಸೇವಕರು ಸ್ವಯಂಪ್ರೇರಣೆಯಿಂದ ಭಾಗವಹಿಸಿ ಸೇವೆ ಸಲ್ಲಿಸಿರುತ್ತಾರೆ.

5. **ಸಹಯೋಗ:** ಮೊಳಲಿ ಕೊಳದಬಳಿಯಲ್ಲಿ ಆಯೋಜಿಸಲಾದ ಕೆರೆ ಹಸ್ತಾಂತರ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಚ್ಛತೆ, ಗಿಡ ನಾಟಿ, ನಾಮಫಲಕ ಅಳವಡಿಕೆ ಕೆಲಸದಲ್ಲಿ ಸಹಕಾರ ನೀಡಿರುತ್ತಾರೆ.





6. **ಎನ್.ಡಿ.ಆರ್.ಎಫ್ ತಂಡದ ಭೇಟಿ:** ಮಳೆಗಾಲದ ಮುನ್ನ ವಿಪತ್ತು ನಿರ್ವಹಣೆಗೆ ವಿಪತ್ತು ಪೀಡಿತ ಪ್ರದೇಶಗಳಲ್ಲಿ ಸರಕಾರ ನಿಯೋಜಿಸುವ ಎನ್.ಡಿ.ಆರ್.ಎಫ್ ತಂಡದೊಂದಿಗೆ ಜನಜಾಗೃತಿ ಪ್ರಾದೇಶಿಕ ನಿರ್ದೇಶಕರ ನೇತೃತ್ವದಲ್ಲಿ ಮಾನ್ಯ ಕಾರ್ಯನಿರ್ವಾಹಕ ನಿರ್ದೇಶಕರ ಪತ್ರವನ್ನು ಎನ್.ಡಿ.ಆರ್.ಎಫ್ ಕಮಾಂಡರ್‌ರವರಿಗೆ 6 ಕಡೆ ಭೇಟಿ ನೀಡಿ ಮಾತುಕತೆ ನಡೆಸಲಾಯಿತು. ಮುಖ್ಯವಾಗಿ ಶೌರ್ಯ ಸ್ವಯಂಸೇವಕರು ಎನ್.ಡಿ.ಆರ್.ಎಫ್.ನೊಂದಿಗೆ ಸೇರಿಕೊಂಡು ಕೆಲಸ ನಿರ್ವಹಿಸಲು ಪೂರಕವಾಗುವಂತೆ ಚರ್ಚೆ ನಡೆಸಲಾಗಿದೆ. ಮುಖ್ಯವಾಗಿ ಪುತ್ತೂರಿನಲ್ಲಿ ಕಮಾಂಡರ್ ಶ್ರೀ ಶಾಂತಿಲಾಲ್ ಜಟಿಯಾ, ಅಂಕೋಲಾದಲ್ಲಿ ಶ್ರೀ ಕಮಲೇಶ್, ವಿಜಯವಾಡ, ಬೈಂದೂರಿನಲ್ಲಿ ಶ್ರೀ ರಾಜೇಂದ್ರ ಕುಮಾರ್, ಮಡಿಕೇರಿಯಲ್ಲಿ ಶ್ರೀ ಅಜಯ್ ಕುಮಾರ್ ಇವರನ್ನು ಭೇಟಿ ಮಾಡಲಾಯಿತು.







7. **ತುರ್ತು ಸ್ಪಂದನೆ:** ರಾಜ್ಯದ 176 ಕಡೆಗಳಲ್ಲಿ ನಡೆದ ಗುಡ್ಡಕುಸಿತ, ಮನೆ ಹಾನಿ, ರಸ್ತೆ ತೆರವು ಮುಂತಾದ ಕಡೆಗಳಲ್ಲಿ ಶೌರ್ಯ ತಂಡದವರು ಕಾರ್ಯಾಚರಣೆ ನಡೆಸಿ ವ್ಯವಸ್ಥೆಯನ್ನು ಸುಗಮಗೊಳಿಸಿರುತ್ತಾರೆ. ವಿಶೇಷವಾಗಿ ಮಂಗಳೂರಿನ ಮೊಂಟೆಪದವು ಕೋಡಿಯಲ್ಲಿ ಅತಿಯಾದ ಮಳೆಯಿಂದ ಭೂ ಕುಸಿತ ಸಂಭವಿಸಿದ ಮನೆಗಳ, ವ್ಯಕ್ತಿಗಳ, ಮೃತಪಟ್ಟವರ ಸಹಕಾರಕ್ಕೆ ಎನ್.ಡಿ.ಆರ್.ಎಫ್. ಪಡೆಯೊಂದಿಗೆ ಕಾರ್ಯಾಚರಣೆ ನಡೆಸಿರುತ್ತಾರೆ.

8. **ತುರ್ತು ಸ್ಪಂದನಾ ತಂಡದ ರಚನೆ:** ಆಕಸ್ಮಿಕ ವಿಪತ್ತುಗಳ ಸಂದರ್ಭದಲ್ಲಿ ತಕ್ಷಣ ನೆರವಿಗೆ ಧಾವಿಸಲು ಸಿದ್ಧರಾಗುವ 15 ರಿಂದ 20 ಮಂದಿ ಸ್ವಯಂಸೇವಕರ ತುರ್ತು ಸ್ಪಂದನಾ ತಂಡವನ್ನು ಈ ವರ್ಷದಲ್ಲಿ ರಚಿಸಲಾಗುತ್ತಿದೆ. ಈ ಪ್ರಕಾರ 35 ತಾಲೂಕುಗಳಲ್ಲಿ ತಂಡವನ್ನು ರಚಿಸಲಾಗಿದೆ.



9. **ವಿಪತ್ತು ನಿರ್ವಹಣಾ ಚಟುವಟಿಕೆಗಳು:** ಪ್ರಸ್ತುತ ವರ್ಷದಲ್ಲಿ ವಿಪತ್ತು ನಿರ್ವಹಣಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ತಕ್ಷಣದ ನಿರ್ವಹಣೆಗಾಗಿ ತುರ್ತು ಸೌಲಭ್ಯವನ್ನು ನೀಡಲು ಪೂರಕವಾಗುವಂತೆ ಮಾನ್ಯ ಕಾರ್ಯನಿರ್ವಾಹಕ ನಿರ್ದೇಶಕರು ಸುತ್ತೋಲೆಯನ್ನು ನೀಡಿರುವುದು ಬಹಳಷ್ಟು ವಿಪತ್ತು ನಿರ್ವಹಣೆಗೆ ಸಹಕಾರಿಯಾಗಿದೆ. ನದಿಪಾತ್ರದಲ್ಲಿರುವವರಿಗೆ ಮಾಹಿತಿ, ಸಂಭಾವ್ಯ ಪ್ರವಾಹದ ಸ್ಥಳಗಳಿಗೆ ಮುನ್ನೆಚ್ಚರಿಕೆ, ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ, ತಕ್ಷಣಕ್ಕೆ ಬೇಕಾಗುವ ವ್ಯವಸ್ಥೆಗಳು, ಹೀಗೆ ವಿವಿಧ ರೀತಿಯ ಮಳೆಗಾಲ ಪೂರ್ವತಯಾರಿಯನ್ನು ನಡೆಸಲಾಗಿದೆ. ಸುಮಾರು 1155 ವಿಪತ್ತು ಸೇವೆಗಳನ್ನು ಯಶಸ್ವಿಯಾಗಿ ನಡೆಸಿರುತ್ತಾರೆ.





10. **ಸಾಮಾಜಿಕ ಸೇವಾ ಚಟುವಟಿಕೆಗಳು:** ವಿಪತ್ತು ನಿರ್ವಹಣಾ ಘಟಕಗಳನ್ನು ಸಕ್ರಿಯವಾಗಿ ಇಟ್ಟುಕೊಳ್ಳುವ ನಿಟ್ಟಿನಲ್ಲಿ ತ್ರೈಮಾಸಿಕ ಒಂದು ಸಾಮಾಜಿಕ ಸೇವಾ ಚಟುವಟಿಕೆಗಳನ್ನು ನಡೆಸಲು ಪ್ರೋತ್ಸಾಹ ನೀಡುತ್ತಿದೆ. ಪ್ರಸ್ತುತ ವರ್ಷದಲ್ಲಿ 180 ರುದ್ರಭೂಮಿ ಸ್ವಚ್ಛತೆ, 73 ಶಾಲೆಯ ಮೇಲ್ಛಾವಣಿ ರಿಪೇರಿ ಕೆಲಸಗಳು, ಶಾಲಾ ಕೈತೋಟ ರಚನೆ, ಬೀಚ್ ಸ್ವಚ್ಛತೆ, ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಛತೆ, ನದಿ ತೀರಗಳ ಸ್ವಚ್ಛತೆ, ರಸ್ತೆಯ ಸೂಚನಾ ಫಲಕಗಳ ಸ್ವಚ್ಛತೆ, ಬಸ್ ತಂಗುದಾಣ ರಚನೆ, ಬಸ್ ನಿಲ್ದಾಣ ಸ್ವಚ್ಛತೆ ಹೀಗೆ 4,271 ಸಾಮಾಜಿಕ ಸೇವೆಗಳನ್ನು ಪ್ರಸ್ತುತ ವರ್ಷದಲ್ಲಿ ನಡೆಸಲಾಗಿರುತ್ತದೆ.





11. **ಶೌರ್ಯದಲ್ಲಿ ಆಪದ್ ಮಿತ್ರ ಸ್ವಯಂಸೇವಕರು:** ಆಪದ್ ಮಿತ್ರ ತರಬೇತಿ ಪಡೆದುಕೊಂಡ ಶೌರ್ಯ ಘಟಕದ 41 ಮಂದಿ ಸ್ವಯಂಸೇವಕರಿಗೆ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ವಿಶೇಷ ಸಭೆ ನಡೆಸಲಾಗಿದ್ದು, ಈ ಸಭೆಯಲ್ಲಿ ತರಬೇತಿ ಪಡೆದ ಶೌರ್ಯ ಸ್ವಯಂಸೇವಕರು ಭಾಗವಹಿಸಿರುತ್ತಾರೆ.





12. **ರಕ್ತದಾನ ಶಿಬಿರ:** ವಿವಿಧ ಸಂಘ–ಸಂಸ್ಥೆಗಳು, ಆಸ್ಪತ್ರೆಗಳ ಸಹಕಾರದೊಂದಿಗೆ ಬೆಳ್ತಂಗಡಿ, ಮಂಜೇಶ್ವರ, ಭಟ್ಕಳ, ಕುಂದಾಪುರ, ಖಾನಾಪುರ ಹೀಗೆ 14 ರಕ್ತದಾನ ಶಿಬಿರಗಳನ್ನು ನಡೆಸಲಾಗಿದ್ದು ಶೌರ್ಯ ಘಟಕದ 314 ಸ್ವಯಂಸೇವಕರು ರಕ್ತದಾನ ಮಾಡಿರುತ್ತಾರೆ.



**13. ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ತರಬೇತಿ:** ಶೌರ್ಯ ಸಮಿತಿಯ ಸ್ವಯಂಸೇವಕರಿಗೆ ಕೊಡಗು, ಉಡುಪಿ, ದಕ್ಷಿಣ ಕನ್ನಡ ಹಾಗೂ ಬಾಗಲಕೋಟೆ ಜಿಲ್ಲೆಯ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಶ್ರೀ ವಿಜಯ್ ಪೂಜಾರ್, ಕೊಡಗು ಜಿಲ್ಲೆಯ ಶ್ರೀ ಅನನ್ಯ ವಾಸುದೇವ್ ತರಬೇತಿ ನೀಡಿದರು.



**14. ರಾಜ್ಯಾದ್ಯಂತ ಶೌರ್ಯ ಸಮಿತಿಗಳಿಗೆ ಕೌಶಲ ತರಬೇತಿ:** ರಾಜ್ಯದಲ್ಲಿರುವ ಎಲ್ಲಾ ಶೌರ್ಯ ಸಮಿತಿಗಳಿಗೆ ತರಬೇತಿ ನೀಡಬೇಕೆನ್ನುವ ವಿಚಾರದಂತೆ ಬೆಳ್ತಂಗಡಿ ಮತ್ತು ಗುರುವಾಯನಕೆರೆ ಸಮಿತಿಯ ಸ್ವಯಂಸೇವಕರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಕೇಂದ್ರ ಕಚೇರಿಯಲ್ಲಿ ತರಬೇತಿಯನ್ನು ಆಯೋಜಿಸಲಾಗಿದ್ದು, ಪರಮ ಪೂಜ್ಯ ಖಾವಂದರು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಎನ್.ಡಿ.ಆರ್.ಎಫ್ ಕಮಾಂಡರ್ ಶಾಂತಿಲಾಲ್ ಜಟಿಯಾರವರು ತಮ್ಮ ತಂಡದೊಂದಿಗೆ ಆಗಮಿಸಿ ತರಬೇತಿ ನೀಡಿದರು. ವಿಟ್ಲ, ಕಡಬ, ಪುತ್ತೂರು, ಉಡುಪಿ, ಬ್ರಹ್ಮಾವರ ಮತ್ತು ಕಾಪು ತಾಲೂಕಿನ ಸಮಿತಿಯ ಸ್ವಯಂಸೇವಕರಿಗೆ ಇವರಿಂದಲೇ ತರಬೇತಿ ನೀಡಲಾಗಿದೆ.

**15. ವಿದ್ಯಾರ್ಥಿಗಳಿಗೆ ತರಬೇತುದಾರರ ತರಬೇತಿ:** ಎಸ್.ಡಿ.ಎಮ್ ಇಂಜಿನಿಯರಿಂಗ್ ಕಾಲೇಜಿನ ಪದವಿ ವಿದ್ಯಾರ್ಥಿಗಳು ಜನಜಾಗೃತಿ ಪ್ರಾದೇಶಿಕ ವಿಭಾಗವನ್ನು ಭೇಟಿ ಮಾಡಿ ಶೌರ್ಯ ವಿಪತ್ತು ನಿರ್ವಹಣಾ ಕಾರ್ಯಕ್ರಮದ ಅನುಷ್ಠಾನದ ವಿಧಾನಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಸ್ವಯಂಸೇವಕರ ಆಯ್ಕೆ, ಘಟಕಗಳೊಂದಿಗೆ ಸಮನ್ವಯತೆ ಸಾಧಿಸುವುದು, ಸ್ವಯಂಸೇವಕರಿಗೆ ವಿಪತ್ತಿನ ವಿಷಯಗಳನ್ನು ತಿಳಿಸುವ ವಿಧಾನ, ಸ್ವಯಂಸೇವಕರು ಸ್ಪಂದನೆ ನೀಡುವ ವಿಧಾನ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ತಮ್ಮ ಅಧ್ಯಯನಕ್ಕೆ ಪೂರಕವಾಗಿ ಪಡೆದುಕೊಂಡರು. ವಿದ್ಯಾರ್ಥಿಗಳಾದ ಬಸವಪ್ರಭು, ಭರತ್ ಎಚ್.ಜಿ., ಗಣೇಶ್ ಮತ್ತು ಕಾರ್ತಿಕ್ ಇವರು ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.



**16. ಯುವ ಆಪದ್ ಮಿತ್ರ ತರಬೇತಿ:** ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಸ್ಕೌಟ್ಸ್ ಗೈಡ್ಸ್, ಕರ್ನಾಟಕ ಇದರ ಸಹಭಾಗಿತ್ವದಲ್ಲಿ ಯುವ ಆಪದ್ ಮಿತ್ರ ವಿಪತ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಸ್ಕೌಟ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಆಯೋಜಿಸಲಾಗಿದ್ದು, ಸಂಘಟಕರ ಕೋರಿಕೆಯಂತೆ ಶ್ರೀ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ಕಾರ್ಯಕ್ರಮಗಳ ಪರಿಚಯ ಮತ್ತು ಕಾರ್ಯಯೋಜನೆಯ ಬಗ್ಗೆ ಮಾಹಿತಿ ನೀಡಲಾಗಿದೆ.



**17. ಸ್ವಯಂಸೇವಕರ ಪ್ರವಾಸ:** ಶೌರ್ಯ ಸ್ವಯಂಸೇವಕರ ಘಟಕಗಳಿಗೆ ಕ್ಷೇತ್ರ ಪ್ರವಾಸಕ್ಕೆ ಅವಕಾಶವಿದ್ದು, ಈ ಬಾರಿ ಶಿರಸಿ, ಬೈಂದೂರು, ವಿಟ್ಲ, ಕಡಬ, ಕುಂದಾಪುರ, ಬಂಟ್ವಾಳ ತಾಲ್ಲೂಕಿನ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಆಗಮಿಸಿರುತ್ತಾರೆ.

**18. ಉರಗ ರಕ್ಷಣೆ:** ಶೌರ್ಯ ವಿಪತ್ತು ನಿರ್ವಹಣಾ ಘಟಕದಲ್ಲಿ ಕರ್ನಾಟಕ ರಾಜ್ಯದಲ್ಲಿ 38 ಉರಗ ರಕ್ಷಕರು ಇದ್ದು ಪ್ರಸ್ತುತ ವರ್ಷದಲ್ಲಿ 418 ಹಾವುಗಳನ್ನು ರಕ್ಷಣೆ ಮಾಡಿ ಕಾಡಿಗೆ ಬಿಟ್ಟಿರುತ್ತಾರೆ.



**19. ಪ್ರಥಮ ಚಿಕಿತ್ಸೆ ಸರ್ಟಿಫಿಕೇಟ್ ಕೋರ್ಸ್:** ಜ್ಯೋತಿ ಆಸ್ಪತ್ರೆ ಬೆಳ್ತಂಗಡಿ, ಕೆ.ಎಮ್.ಸಿ. ಆಸ್ಪತ್ರೆ ಮಂಗಳೂರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ.) ಧರ್ಮಸ್ಥಳ ಸಹಭಾಗಿತ್ವದಲ್ಲಿ ದಿನಾಂಕ 22-09-2025ರಂದು ವಿಪತ್ತು ನಿರ್ವಹಣಾ ಘಟಕಗಳ ಸ್ವಯಂಸೇವಕರಿಗೆ ಪ್ರಥಮ ಚಿಕಿತ್ಸಾ ಸರ್ಟಿಫಿಕೇಟ್ ಕೋರ್ಸ್ ತರಬೇತಿ ನಡೆಸಲಾಯಿತು. 36 ಮಂದಿ ಸ್ವಯಂಸೇವಕರು ತರಬೇತಿ ಪಡೆದಿರುತ್ತಾರೆ.



**20. ಸಮುದ್ರ ಕಿನಾರೆ ಸ್ವಚ್ಛತಾ ಅಭಿಯಾನ:** ಅಂತಾರಾಷ್ಟ್ರೀಯ ಕಡಲ ತೀರದ ಸ್ವಚ್ಛತಾ ಅಭಿಯಾನದ ಅಂಗವಾಗಿ ಕರಾವಳಿ ತೀರದ ತಾಲ್ಲೂಕುಗಳಾದ ಕಾಸರಗೋಡು, ಮಂಗಳೂರು, ಉಡುಪಿ, ಬೈಂದೂರು, ಕುಂದಾಪುರ, ಭಟ್ಕಳ, ಕುಮಟಾ, ಅಂಕೋಲಾ ಮತ್ತು ಕಾರವಾರ ತಾಲ್ಲೂಕಿನ ಘಟಕಗಳ ಸ್ವಯಂಸೇವಕರು ಸಮುದ್ರ ತೀರದಲ್ಲಿ ಸ್ವಚ್ಛತಾ ಶ್ರಮದಾನವನ್ನು ನಡೆಸಿದರು. ಇದೇ ರೀತಿ ಕಡಲ ಕಿನಾರೆಯ 38 ಕಡೆಗಳಲ್ಲಿ ನಮ್ಮ ಸ್ವಯಂಸೇವಕರು ಕರ್ತವ್ಯ ನಿರ್ವಹಿಸಿ ಸ್ವಚ್ಛ ಭಾರತ್ ಅಭಿಯಾನದಲ್ಲಿ ಪಾಲ್ಗೊಂಡಿರುತ್ತಾರೆ.



**21. ಕರ್ನಾಟಕ ರಾಜ್ಯ ಅಪಾಯ ಕಡಿತದ ಮಾರ್ಗಸೂಚಿ ಬಿಡುಗಡೆ ಕಾರ್ಯಕ್ರಮ**



ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಕರ್ನಾಟಕ ನೈಸರ್ಗಿಕ ವಿಕೋಪ ನಿಗಾ ಕೇಂದ್ರ (Karnataka State Natural Disaster Monitoring Centre) ದಲ್ಲಿ ಅಂತಾರಾಷ್ಟ್ರೀಯ ವಿಪತ್ತು ಕಡಿತದ ದಿನಾಚರಣೆ ಪ್ರಯುಕ್ತ ನಡೆದ

ಕರ್ನಾಟಕ ರಾಜ್ಯ ಅಪಾಯ ಕಡಿತದ ಮಾರ್ಗಸೂಚಿ– 2025–2030 ಬಿಡುಗಡೆ ಕಾರ್ಯಕ್ರಮವು ದಿನಾಂಕ: 13.10.2025 ರಂದು ನಡೆದಿದ್ದು, ಜನಜಾಗೃತಿ ಪ್ರಾದೇಶಿಕ ವಿಭಾಗದಿಂದ 7 ಮಂದಿ ಸಿಬ್ಬಂದಿಗಳು ಭಾಗವಹಿಸಿದರು. ಕರ್ನಾಟಕ ರಾಜ್ಯ ಅಪಾಯ ಕಡಿತದ ಮಾರ್ಗಸೂಚಿಯನ್ನು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಮಿಶನರ್ ಶ್ರೀಮತಿ ಎಸ್. ಹೊನ್ನಾಂಬಾ, ಐ.ಎ.ಎಸ್.ರವರು ಬಿಡುಗಡೆ ಮಾಡಿದರು. ಯೂನಿಸೆಫ್ ಸಂಸ್ಥೆಯ ಹೈದರಾಬಾದ್ ಮುಖ್ಯಸ್ಥರಾದ ಡಾ. ಜಲಾಲೆಮ್ ತಫೆಸ್ಸೆ, ಕರ್ನಾಟಕ ನೈಸರ್ಗಿಕ ವಿಕೋಪ ನಿಗಾ ಕೇಂದ್ರದ ನಿರ್ದೇಶಕರಾದ ಶ್ರೀ ಮುಲ್ಲೈ ಮುಹಿಲನ್ ಎಮ್.ಪಿ, ಐ.ಎ.ಎಸ್ ಇವರು ಉಪಸ್ಥಿತರಿದ್ದರು. ಯೂನಿಸೆಫ್ ಸಂಸ್ಥೆಯ ಡಾ. ಮಹೇಂದ್ರ ರಾಜಾರಾಮನ್ ಇವರು 2025 ರಿಂದ 2030 ರ ವರೆಗಿನ ವಿಪತ್ತು ಮುಕ್ತ ಕರ್ನಾಟಕದ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಜನಜಾಗೃತಿ ಪ್ರಾದೇಶಿಕ ವಿಭಾಗದ ಯೋಜನಾಧಿಕಾರಿಗಳಾದ ಜೈವಂತ ಪಟಗಾರ್, ಕಿಶೋರ್ ಕುಮಾರ್, ನಾಗೇಶ್ ವೈ, ನಾಗರಾಜ್, ರಾಜೇಶ್, ಮುಖೇಶ್ ಮತ್ತು ಮೇಲ್ವಿಚಾರಕರಾದ ದರ್ಶನ್ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

22. **ಏಕತಾ ಓಟ:** ಪೊಲೀಸ್ ಇಲಾಖೆ ಧರ್ಮಸ್ಥಳ ಠಾಣೆ, ಎಸ್.ಡಿ.ಎಮ್ ಶಿಕ್ಷಣ ಸಂಸ್ಥೆಗಳ ಸಹಭಾಗಿತ್ವದಲ್ಲಿ ದಿನಾಂಕ: 31.10.2025ರಂದು ರಾಷ್ಟ್ರೀಯ ಏಕತಾ ದಿವಸ್ ಅಂಗವಾಗಿ ನಡೆದ ಏಕತಾ ಓಟದಲ್ಲಿ ಶೌರ್ಯ ವಿಪತ್ತು ನಿರ್ವಹಣಾ ಸ್ವಯಂಸೇವಕರು ಭಾಗವಹಿಸಿದರು. ಉಜಿರೆಯ ಜನಾರ್ದನ ಸ್ವಾಮಿ ದೇವಾಲಯದ ಮೈದಾನದಿಂದ ಎಸ್.ಡಿ.ಎಮ್ ಕ್ರೀಡಾಂಗಣದವರೆಗೆ ಏಕತಾ ಓಟ ನಡೆಯಿತು.



23. **ಶೌರ್ಯ ಬ್ಯಾಗ್ ವಿತರಣೆ:** ಶೌರ್ಯ ಸ್ವಯಂಸೇವಕರಿಗೆ ಅನುಕೂಲವಾಗುವ ಬ್ಯಾಗ್ ಒಂದನ್ನು ಈ ಬಾರಿ ಪೂಜ್ಯರು ಮುರುಡೇಶ್ವರದ ಮದ್ಯವರ್ಜನ ಶಿಬಿರದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿ ಎಲ್ಲಾ ಸ್ವಯಂಸೇವಕರಿಗೆ ನೀಡುವಂತೆ ತಿಳಿಸಿದರು. ಈ ಪ್ರಕಾರ ರಾಜ್ಯಾದ್ಯಂತ ಸ್ವಯಂಸೇವಕರಿಗೆ ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯ ಮೂಲಕ ಬ್ಯಾಗ್‌ಗಳನ್ನು ವಿತರಿಸಲಾಗಿದೆ.






24. **ಪ್ರಧಾನಿಗಳ ಕಾರ್ಯಕ್ರಮದಲ್ಲಿ ಶೌರ್ಯ ತಂಡದಿಂದ ಸೇವೆ:** ಉಡುಪಿಯಲ್ಲಿ ನಡೆದ ಲಕ್ಷ ಕಂಠ ಪಾರಾಯಣ ಕಾರ್ಯಕ್ರಮದಲ್ಲಿ ದೇಶದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ಆಗಮಿಸಿದ್ದು, ಶೌರ್ಯ ತಂಡದ ಸ್ವಯಂಸೇವಕರಿಗೆ ಉಡುಪಿ ಜಿಲ್ಲಾಡಳಿತವು ಜನಂದಣಿ ನಿಯಂತ್ರಣೆ, ಅನ್ನಸಂತರ್ಪಣೆ ಸೇವೆಗೆ ಸ್ವಯಂಸೇವಕರಾಗಿ ಭಾಗವಹಿಸಲು ಮನವಿ ಮಾಡಿಕೊಂಡಿದ್ದು ಈ ಹಿನ್ನೆಲೆಯಲ್ಲಿ ಉಡುಪಿ, ಕಾಪು ಮತ್ತು ಬ್ರಹ್ಮಾವರ ತಾಲೂಕಿನ 200 ಸ್ವಯಂಸೇವಕರು ಸೇವೆ ಸಲ್ಲಿಸಿರುತ್ತಾರೆ.

25. **ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಂದ ಮಾರ್ಗದರ್ಶನ:** ದಿನಾಂಕ 20.12.2025ರಂದು ನಡೆದ ಬೆಳ್ತಂಗಡಿ ಮತ್ತು ಗುರುವಾಯನಕೆರೆ ಸಮಿತಿಯ ಸ್ವಯಂಸೇವಕರ ಸಭೆಯಲ್ಲಿ ಭಾಗವಹಿಸಿದ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ಅನಿಲ್ ಕುಮಾರ್ ಎಸ್.ಎಸ್.ರವರು ಸ್ವಯಂಸೇವಕರಿಗೆ ಮಾರ್ಗದರ್ಶನ ನೀಡಿದರು.

26. **ಎನ್.ಡಿ.ಆರ್.ಎಫ್ ಪಡೆ ಮತ್ತು ಅಂತಾರಾಷ್ಟ್ರೀಯ ತರಬೇತಿದಾರರಿಂದ ತರಬೇತಿ:** ಶೌರ್ಯ ವಿಪತ್ತು ನಿರ್ವಹಣಾ ಘಟಕದ 6 ಮಂದಿ ಸ್ವಯಂಸೇವಕರಿಗೆ ಅಂತಾರಾಷ್ಟ್ರೀಯ ಈಜು ಹಾಗೂ ಸುರಕ್ಷಿತ ಮುಳುಗುವಿಕೆ ತರಬೇತಿ ಸಂಸ್ಥೆಯಾದ FCOA (Freediving Coaches Of Asia) ವತಿಯಿಂದ ತರಬೇತಿ ಕಾರ್ಯಕ್ರಮವು ವಿಟ್ಲ ತಾಲ್ಲೂಕಿನ ವಾರಣಾಸಿ ಸಾವಯವ ಫಾರ್ಮ್ ಅಡ್ಯನಡ್ಕದಲ್ಲಿ ನಡೆಸಲಾಯಿತು. FCOA ಸಂಸ್ಥಾಪಕರಾದ ಹಾಲೆಂಡ್‌ನ ಶ್ರೀ ಜಿರೋಯೆನ್ ಎಲೌಟ್, ನ್ಯೂಯಾರ್ಕ್‌ನ ಅಂಜಲಿ, ಕೇರಳದ ಕೊಟ್ಟಾಯಂನ ಜಾಕೋಬ್ ಜೋಸ್‌ರವರು ತರಬೇತಿ ನೀಡಿದರು. ರಾಜ್ಯದ 14 ಸಮಿತಿಗಳ ಸ್ವಯಂಸೇವಕರಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್.ಡಿ.ಆರ್.ಎಫ್) ನಿಂದ ತರಬೇತಿಯನ್ನು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಹಯೋಗದೊಂದಿಗೆ ನಡೆಸಲಾಯಿತು.







**"ಆಪತ್ತು ಬಂದಾಗ ಸಹಕರಿಸುವವನು ದೇವರಿಗೆ ಸಮಾನ. ಧನ, ಧಾನ್ಯ, ಸಂಪತ್ತು ಶಾಶ್ವತವಲ್ಲ, ಸೇವಾ ಮನೋಭಾವನೆಯಿಂದ ಸಂಪಾದಿಸಿದ ಪುಣ್ಯ ಶಾಶ್ವತವಾಗಿದೆ."**

**– ಡಾ। ಹೇಮಾವತಿ ವೀ. ಹೆಗ್ಗಡೆಯವರು**
**ಅಧ್ಯಕ್ಷರು, ಜ್ಞಾನವಿಕಾಸ ಮಹಿಳಾ ಕಾರ್ಯಕ್ರಮ**

# 16. ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ



ಪೂಜ್ಯರ ಬಹು ನಿರೀಕ್ಷೆಯ 'ಹಸಿರು ಬೆಳೆಸಿ ಉಸಿರು ಉಳಿಸಿ' ಎನ್ನುವ ಸಂದೇಶದೊಂದಿಗೆ ಪರಿಸರ ಸಂರಕ್ಷಣೆಗಾಗಿ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮವನ್ನು ಪ್ರತೀ ವರ್ಷವೂ ಹಮ್ಮಿಕೊಳ್ಳಲಾಗುತ್ತಿದೆ. ಮುಖ್ಯವಾಗಿ ಪ್ರಾಣಿ ಪಕ್ಷಿಗಳಿಗೆ ಆಹಾರ ಲಭ್ಯವಾಗುವಂತೆ ಹಣ್ಣು ಹಂಪಲುಗಳ ಗಿಡಗಳನ್ನು ಕಾಡಿನಂಚಿನಲ್ಲಿ ನೆಡುವುದು. ಶಾಲಾವನ, ದೇವರಕಾಡು, ವಾಣಿಜ್ಯ ವನ, ಕೆರೆ ಅಂಗಳದಲ್ಲಿ ಗಿಡನಾಟಿ, ಶೌರ್ಯವನಕ್ಕೆ ಪೂರಕವಾಗಿ ಗಿಡನಾಟಿ ಮಾಡಲಾಗುತ್ತಿದೆ. ಈ ಬಾರಿ ವಿಶೇಷವಾಗಿ ಗಿಡನಾಟಿ ಮಾಡಿದ ಸ್ಥಳಗಳ ಅನುಪಾಲನೆ ಹಾಗೂ ದಾಖಲೀಕರಣಕ್ಕೆ ಪೂರಕವಾಗುವಂತೆ 'ಜಿಯೋ ಟ್ಯಾಗ್' ವ್ಯವಸ್ಥೆಯನ್ನು ಮಾನ್ಯ ಕಾರ್ಯನಿರ್ವಾಹಕ ನಿರ್ದೇಶಕರ ಮಾರ್ಗದರ್ಶನದಲ್ಲಿ ಅನುಷ್ಠಾನಗೊಳಿಸಲಾಗಿದೆ. ವರದಿ ವರ್ಷದಲ್ಲಿ 56 ಫ್ರೂಟ್ ಝೋನ್‌ಗಳನ್ನು ಮಾಡಲಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಮಟ್ಟದ ಲಕ್ಷ ವೃಕ್ಷ ಗಿಡಗಳ ನಾಟಿ ಚಾಲನಾ ಕಾರ್ಯಕ್ರಮವನ್ನು ಉಡುಪಿ ಜಿಲ್ಲೆಯ ಹೆಬ್ರಿ ಗ್ರಾಮದ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನವನದಲ್ಲಿ ಕಾರ್ಕಳದ ಮಾನ್ಯ ಶಾಸಕರಾದ ವಿ. ಸುನೀಲ್ ಕುಮಾರ್ ಹಾಗೂ ಗಣ್ಯರು ಹಣ್ಣಿನ ಗಿಡವನ್ನು ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.




**ವೃಕ್ಷಾ ಬಂಧನ:** ಹಸಿರು ಉಳಿದರೆ ಉಸಿರು ಎನ್ನುವಂತೆ ಪ್ರಕೃತಿಯನ್ನು ಉಳಿಸುವುದು ಹಾಗೂ ಬೆಳಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ. ಕಾಡನ್ನು ರಕ್ಷಿಸುತ್ತೇವೆ ಎನ್ನುವ ದೀಕ್ಷೆಯನ್ನು ಪಡೆದುಕೊಂಡು ಇದರ ಪ್ರತೀಕವಾಗಿ ಮಾನ್ಯ ಶಾಸಕರು ಗಣ್ಯರನ್ನೊಳಗೊಂಡು "ವೃಕ್ಷಾ ಬಂಧನ"ವನ್ನು ಕಟ್ಟುವ ಮೂಲಕ ದೀಕ್ಷೆಯನ್ನು ಕೈಗೊಂಡರು. ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಮಾನ್ಯ ಶ್ರೀ ಅನಿಲ್ ಕುಮಾರ್ ಎಸ್.ಎಸ್. ರವರು ಕಾರ್ಯಕ್ರಮದ ಕುರಿತು ಮತ್ತು ಪೂಜ್ಯರ ಆಶಯಗಳ ಬಗ್ಗೆ ಮಾತನಾಡಿದರು. ಇದೇ ಸಂದರ್ಭದಲ್ಲಿ ಸಾಧಕ ಅರಣ್ಯ ಕೃಷಿಕರಾದ ಶ್ರೀ ಸಚಿನ್ ಭಿಡೆ ಇವರಿಗೆ "ಅರಣ್ಯ ಮಿತ್ರ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾವನ, ದೇವರಕಾಡು, ವಾಣಿಜ್ಯ ವನ, ಕೆರೆ ಅಂಗಳದಲ್ಲಿ ಗಿಡನಾಟಿ, ಶೌರ್ಯವನಕ್ಕೆ ಪೂರಕವಾಗಿ ಸಸಿಗಳನ್ನು ವಿತರಿಸಲಾಯಿತು.





**ಜಿಯೋ ಟ್ರಾಕಿಂಗ್ ವ್ಯವಸ್ಥೆ:** ಕಾಡು ಹಣ್ಣಿನ ಗಿಡನಾಟಿ ಕುರಿತು ಜಿಯೋ ಟ್ರಾಕಿಂಗ್ ವ್ಯವಸ್ಥೆಯನ್ನು ಗ್ರಾಮಾಭಿವೃದ್ಧಿ ಯೋಜನೆಯಲ್ಲಿ

ಅಳವಡಿಸಲಾಗಿದೆ. ಹಣ್ಣಿನ ಗಿಡಗಳನ್ನು ನಾಟಿ ಮಾಡುವಾಗ ಸ್ವಲ್ಪ ವಿಸ್ತಾರ ಪ್ರದೇಶದಲ್ಲಿ ಒಂದೇ ಜಾತಿಯ ಗಿಡಗಳನ್ನು ನೆಟ್ಟಲ್ಲಿ ಅವುಗಳನ್ನು ಫ್ರೋಟ್ ಝೋನ್ ಎಂದು ವಿಷೇಶವಾಗಿ ಜಿಯೋ ಟ್ಯಾಗ್‌ನಲ್ಲಿ ಗುರುತಿಸಿ ಅನುಪಾಲನೆ ಮಾಡುವ ದೃಷ್ಟಿಯಿಂದ ಈ ಸಾಫ್ಟ್‌ವೇರ್ ಕೆಲಸ ಮಾಡುತ್ತದೆ. ಈ ಬಗ್ಗೆ ನೂತನ ಸಾಫ್ಟ್‌ವೇರ್ ಅನ್ನು ಬಿಡುಗಡೆ ಮಾಡಲಾಯಿತು.

**ಕಳೆದ 5 ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಗಣನೀಯವಾದ ಸಾಧನೆಯನ್ನು ಮಾಡಲಾಗಿದೆ. ವಿವರ ಈ ಕೆಳಗಿನಂತಿದೆ**

| ಕ್ರ. ಸಂ. | ವಿವರ | 2021-22 | 2022-23 | 2023-24 | 2024-25 | 2025-26 | ಒಟ್ಟು |
|---|---|---|---|---|---|---|---|
| 1 | ನಡೆಸಿದ ಕಾರ್ಯಕ್ರಮಗಳು | 1,864 | 2,528 | 1,737 | 2,368 | 396 | **8,893** |
| 2 | ನಾಟಿ ಮಾಡಿದ ಹಣ್ಣಿನ ಗಿಡಗಳು | 55,838 | 184,561 | 130,008 | 124,838 | 38,094 | **533,339** |
| 3 | ನಾಟಿ ಮಾಡಿದ ಇತರ ಗಿಡಗಳು | 60,162 | 467,736 | 206,038 | 404,799 | 25,334 | **1,164,069** |
| 4 | ಒಟ್ಟು ಗಿಡಗಳ ಸಂಖ್ಯೆ | 116,000 | 652,297 | 336,046 | 529,637 | 63,428 | **1,697,408** |
| 5 | ವಿಸ್ತೀರ್ಣ (ಎಕ್ರೆ) | 1,343 | 2,918 | 3,050 | 3,810 | 1223 | **12,344** |
| 6 | ಯೋಜನಾ ಕಚೇರಿಯಿಂದ ಖರ್ಚಾದ ಮೊತ್ತ | 11,50,653 | 20,72,340 | 32,51,705 | 11,62,000 | 10,03,400 | **86,40,098/-** |
| 7 | ವಿಪತ್ತು ನಿರ್ವಹಣೆ ಬಜೆಟ್ ನಿಂದ ಖರ್ಚಾದ ಮೊತ್ತ | 2,51,900 | 86,725 | - | - | - | **3,38,625/-** |



# 17. ಪುಣ್ಯಸ್ಮರಣೆ

ಜನಜಾಗೃತಿ ವೇದಿಕೆಯ ಕಾರ್ಯಕ್ರಮಗಳಲ್ಲಿ ತನು-ಮನ-ಧನದ ಸಹಕಾರದೊಂದಿಗೆ ವೇದಿಕೆಯ ಯಶಸ್ವಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಈ ಕೆಳಗಿನ ಪದಾಧಿಕಾರಿಗಳು ದೈವಾಧೀನರಾಗಿದ್ದು, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಿದ್ದೇವೆ.

## 2025-26ನೇ ಸಾಲಿನಲ್ಲಿ ದೈವಾಧೀನರಾದ ಜನಜಾಗೃತಿ ಸದಸ್ಯರು



**ತುಕಾರಾಮ ಶೆಟ್ಟಿ**
ಪ್ರಾದೇಶಿಕ ವಿಭಾಗ: **ಉಡುಪಿ**
ಜಿಲ್ಲೆ : **ದ.ಕ. 1,** ತಾಲೂಕು: **ಬಜ್ಪೆ**



**ವೆಂಕಟ**
ಪ್ರಾದೇಶಿಕ ವಿಭಾಗ: **ಉಡುಪಿ**
ಜಿಲ್ಲೆ : **ಉ.ಕ. 1,** ತಾಲೂಕು: **ಬೈಂದೂರು**



**ರಾಜೀವ ದೇವಾಡಿಗ**
ಪ್ರಾದೇಶಿಕ ವಿಭಾಗ: **ಉಡುಪಿ**
ಜಿಲ್ಲೆ : **ಉ.ಕ. 2,** ತಾಲೂಕು: **ಬೈಂದೂರು**



**ಅಪ್ಪಣ್ಣ ಹೆಗ್ಡೆ**
ಪ್ರಾದೇಶಿಕ ವಿಭಾಗ: **ಉಡುಪಿ**
ಜಿಲ್ಲೆ : **ಉಡುಪಿ,** ತಾಲೂಕು: **ಕುಂದಾಪುರ**

## 2025–26ನೇ ಸಾಲಿನಲ್ಲಿ ಮರಣ ಹೊಂದಿದ ಜನಜಾಗೃತಿ ಸದಸ್ಯರು



**ದಿನೇಶ್ ಕುಮಾರ್ ಆನಡ್ಕ**
ಪ್ರಾದೇಶಿಕ ವಿಭಾಗ: **ಉಡುಪಿ**
ಜಿಲ್ಲೆ : **ದ.ಕ. 1,** ತಾಲೂಕು: **ಮೂಡುಬಿದ್ರೆ**



**ಉದಯಕುಮಾರ್ ಶೆಟ್ಟಿ**
ಪ್ರಾದೇಶಿಕ ವಿಭಾಗ: **ಉಡುಪಿ**
ಜಿಲ್ಲೆ : **ಉಡುಪಿ,** ತಾಲೂಕು: **ಕಾಪು**



**ಕೃಷ್ಣೇಗೌಡ**
ಪ್ರಾದೇಶಿಕ ವಿಭಾಗ: **ಮೈಸೂರು**
ಜಿಲ್ಲೆ : **ಮಂಡ್ಯ,** ತಾಲೂಕು: **ಮಳವಳ್ಳಿ**



**ಸೋಮಣ್ಣ ಡ್ಯಾವಪ್ಪನಹಳ್ಳಿ**
ಪ್ರಾದೇಶಿಕ ವಿಭಾಗ: **ಮೈಸೂರು**
ಜಿಲ್ಲೆ : **ಹಾಸನ,** ತಾಲೂಕು: **ಹಾಸನ**

# ಧನ್ಯವಾದ ಸಮರ್ಪಣೆ

ಜನಜಾಗೃತಿ ಪ್ರಾದೇಶಿಕ ವಿಭಾಗದ ಕಾರ್ಯಚಟುವಟಿಕೆಗಳ ಮೇಲೆ ವಿಶೇಷ ಕಾಳಜಿ, ಆಶೀರ್ವಾದ ಮತ್ತು ಮಾರ್ಗದರ್ಶನವನ್ನು ನೀಡುತ್ತಿರುವ ಪೂಜ್ಯ ಡಾ॥ ಡಿ. ವೀರೇಂದ್ರ ಹೆಗ್ಗಡೆಯವರಿಗೆ, ನಮ್ಮ ಯಶಸ್ಸಿಗೆ ಮಾತೃ ವಾತ್ಸಲ್ಯದಿಂದ ಸ್ಫೂರ್ತಿ ತುಂಬುವ ಮಾತೃಶ್ರೀ ಹೇಮಾವತಿ ವೀ. ಹೆಗ್ಗಡೆಯವರಿಗೆ ಭಕ್ತಿಪೂರ್ವಕ ನಮನಗಳು.

ನಮ್ಮ ಯಶಸ್ಸಿನಲ್ಲಿ ಸದಾ ಪ್ರೇರಕರಾಗಿರುವ ಶ್ರೀ ಡಿ. ಹರ್ಷೇಂದ್ರ ಕುಮಾರ್, ಶ್ರೀ ಡಿ. ಸುರೇಂದ್ರ ಕುಮಾರ್, ಶ್ರೀ ಡಿ. ರಾಜೇಂದ್ರ ಕುಮಾರ್, ಶ್ರೀ ಶ್ರೇಯಸ್ ಕುಮಾರ್ ಹಾಗೂ ಪೂಜ್ಯರ ಎಲ್ಲಾ ಕುಟುಂಬ ವರ್ಗದವರಿಗೆ, ಟ್ರಸ್ಟಿಗಳಾದ ಶ್ರೀಮತಿ ಶ್ರದ್ಧಾ ಅಮಿತ್, ಶ್ರೀ ಅನಿಲ್ ಕುಮಾರ್ ಎಸ್.ಎಸ್., ಡಾ| ಪಿ.ವಿ. ಭಂಡಾರಿ ಉಡುಪಿ, ಡಾ| ಶ್ರೀನಿವಾಸ್ ಭಟ್, ಮಂಗಳೂರು, ಶ್ರೀ ವಿ. ರಾಮಸ್ವಾಮಿ, ವೇದಿಕೆಯ ರಾಜ್ಯ ಸಂಘಟನಾ ಅಧ್ಯಕ್ಷರಾದ ಶ್ರೀ ನಟರಾಜ್ ಬಾದಾಮಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಎಲ್ಲಾ ಟ್ರಸ್ಟಿಗಳಿಗೆ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅನಿಲ್ ಕುಮಾರ್ ಎಸ್.ಎಸ್, ಮುಖ್ಯ ಹಣಕಾಸು ನಿರ್ದೇಶಕರಾದ ಶ್ರೀ ಶಾಂತಾರಾಮ ಪೈಯವರಿಗೂ ವಂದನೆಗಳು. ವೇದಿಕೆಯ ಸ್ಥಾಪಕಾಧ್ಯಕ್ಷರು, ನಿಕಟಪೂರ್ವ ರಾಜ್ಯಾಧ್ಯಕ್ಷರುಗಳು, ರಾಜ್ಯದ ಎಲ್ಲಾ ಹಾಲಿ ಮತ್ತು ಮಾಜಿ ಜಿಲ್ಲಾ ಸಂಘಟನಾ ಅಧ್ಯಕ್ಷರುಗಳು, ತಾಲೂಕು ಸಂಘಟನಾ ಅಧ್ಯಕ್ಷರುಗಳು, ಕೋ-ಆಪ್ಟ್ ಸದಸ್ಯರು, ಪದಾಧಿಕಾರಿಗಳು, ಯೋಜನೆಯ ಪ್ರಾದೇಶಿಕ ನಿರ್ದೇಶಕರುಗಳು, ನಿರ್ದೇಶಕರುಗಳು, ಯೋಜನಾಧಿಕಾರಿಗಳು, ಕಾರ್ಯಕರ್ತರು, ಸೇವಾಪ್ರತಿನಿಧಿಗಳು, ಪೋಷಕರು, ನವಜೀವನ ಸದಸ್ಯರು ಮತ್ತು ಜನಜಾಗೃತಿ ಪ್ರಾದೇಶಿಕ ವಿಭಾಗದ ಯೋಜನಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಕ್ಕೆ ಮನದಾಳದ ಕೃತಜ್ಞತೆಗಳು.

ಜನಜಾಗೃತಿ ವೇದಿಕೆಯ ಹಾಗೂ ಪ್ರಾದೇಶಿಕ ವಿಭಾಗದ ಕಾರ್ಯಕ್ರಮಗಳ ಯಶಸ್ಸಿಗೆ ಸಹಕಾರ ನೀಡುತ್ತಿರುವ ಎಲ್ಲಾ ಹಿತೈಷಿಗಳಿಗೆ, ದಾನಿಗಳಿಗೆ, ವೇದಿಕೆಯ ಕಾರ್ಯಚಟುವಟಿಕೆಗಳ ಸಂಯೋಜನೆಯಲ್ಲಿ ಸಹಕರಿಸುತ್ತಿರುವ ಶ್ರೀ ವೀರು ಶೆಟ್ಟಿ ಧರ್ಮಸ್ಥಳ, ಶ್ರೀ ಕೃಷ್ಣ ಸಿಂಗ್, ಶ್ರೀ ರಾಜೇಂದ್ರ ದಾಸ್, ಶ್ರೀ ಸುನಿಲ್ ಬೇಕಲ್, ಶ್ರೀ ಮಹಾವೀರ ಅಜ್ರಿ, ಶ್ರೀ ಪಾರ್ಶ್ವನಾಥ್, ಶ್ರೀ ಸುಬ್ರಹ್ಮಣ್ಯ ಪ್ರಸಾದ್, ಶ್ರೀ ದೀಕ್ಷಿತ್, ದೇವಳ ಸಿಬ್ಬಂದಿಗಳಿಗೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು, ಶ್ರೀ ಧ.ಮಂ. ಮೆಡಿಕಲ್ ಟ್ರಸ್ಟ್, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಸ್ಪತ್ರೆ, ಉಜಿರೆ, ಕೆ.ಎಸ್. ಹೆಗ್ಡೆ ಆಸ್ಪತ್ರೆ ದೇರಳಕಟ್ಟೆ, ಲಿಂಕ್ ಸಲಹಾ ಕೇಂದ್ರ ಮಂಗಳೂರು, ಎ.ವಿ. ಬಾಳಿಗ ಆಸ್ಪತ್ರೆ ಉಡುಪಿ, ಸಿರಿ ಗ್ರಾಮೋದ್ಯೋಗ ಸಂಸ್ಥೆ (ರಿ.) ಉಜಿರೆ, ಬಾಹ್ಯ ಲೆಕ್ಕಪರಿಶೋಧಕರಾದ ಶ್ರೀ ಪ್ರಕಾಶ್ ಬಾಸ್ರಿಯವರಿಗೂ ನಲ್ಮೆಯ ನಮನಗಳು.

ವಿಪತ್ತು ನಿರ್ವಹಣಾ ಕಾರ್ಯಕ್ರಮದ ಸಂಯೋಜನೆಯಲ್ಲಿ ಮಹತ್ವದ ಸಹಕಾರ ನೀಡಿರುವ ಶ್ರೀ ಜಗದೀಶ್ ಅಡಪ, ಉಷಾ ಫೈರ್ ಎಂಡ್ ಸೇಫ್ಟಿ, ಡಾ| ಮಹೇಂದ್ರ ರಾಜಾರಾಮ್, ಯುನಿಸೆಫ್, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಪ್ರಿನ್ಸಿಪಾಲ್ ಸೆಕ್ರಟರಿ, ಕಾರ್ಯದರ್ಶಿಗಳು, ಸೆಕ್ಷನ್ ಆಫೀಸರ್ಸ್ ಮತ್ತು ಎನ್‌ಡಿಆರ್‌ಎಫ್, ಎಸ್‌ಡಿಆರ್‌ಆಫ್, ಜಿಲ್ಲಾಡಳಿತ, ಜನಪ್ರತಿನಿಧಿಗಳು, ಅಗ್ನಿಶಾಮಕದಳ, ಪೊಲೀಸು ಇಲಾಖೆ, ಅರಣ್ಯ ಇಲಾಖೆ, ಇಂಧನ ಇಲಾಖೆ, ಆರೋಗ್ಯ ಇಲಾಖೆ, ಜಿಲ್ಲಾ ವಿಪತ್ತು ನಿರ್ವಹಣಾ ಕೋಶದ ಎಲ್ಲಾ ಜಿಲ್ಲಾ ಘಟಕಗಳಿಗೆ, ತರಬೇತು ಪಡೆದ ಮಾಸ್ಟರ್, ಕ್ಯಾಪ್ಟನ್, ಕೋರ್ ಕಮಿಟಿ, ಘಟಕ ಪ್ರತಿನಿಧಿ, ಸಂಯೋಜಕರು, ಸ್ವಯಂಸೇವಕರಿಗೆ ಪ್ರೀತಿಪೂರ್ವಕ ಧನ್ಯವಾದಗಳು.

**ಅಧ್ಯಕ್ಷರು/ಕಾರ್ಯದರ್ಶಿ**

ಸುರೇಂದ್ರ ಮ್ಯಾನ್ಷನ್ ಕಟ್ಟಡ, 1ನೇ ಮಹಡಿ, ಕೆನರಾ ಬ್ಯಾಂಕ್ ಬಳಿ, ಮುಖ್ಯರಸ್ತೆ ಬೆಳ್ತಂಗಡಿ, ದ.ಕ. ಜಿಲ್ಲೆ-574 214.

Phone: 08256-232133, 9448468332, 9611581332.

Email: janajagruthi@skdrdpindia.org,

Janajagruthi Website: http://dharmasthaladrc.com,

Shaurya Website: skdrdpdisastermanagement.org,

Facebook: Skdrdp Janajagrati and showrya program

❖❖❖

# ದುಶ್ಚಟಗಳು ದೇಶದ ಅಭಿವೃದ್ಧಿಗೆ ಮಾರಕ: ಮೋಹನ ಭಸ್ಮೆ

■ ವಿಕ ಸುದ್ದಿಲೋಕ ಗೋಕಾಕ

ದುಶ್ಚಟಗಳು ದೇಶದ ಅಭಿವೃದ್ಧಿಗೆ ಮಾರಕ ಎಂದು ತಾಲೂಕು ದಂಡಾಧಿಕಾರಿ ಡಾ.ಮೋಹನ ಭಸ್ಮೆ ಹೇಳಿದರು.

ನಗರದ ಹೇಮರೆಡ್ಡಿ ಮಲ್ಲಮ್ಮ ಸಭಾಭವನದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ವತಿಯಿಂದ ಗಾಂಧಿ ಜಯಂತಿ ಅಂಗವಾಗಿ ನಡೆದ ಗಾಂಧಿ ಸ್ಮರಣೆ ಹಾಗೂ ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಗೋಕಾಕದಲ್ಲಿ ನಡೆದ ಗಾಂಧಿ ಸ್ಮರಣೆ ಹಾಗೂ ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮದಲ್ಲಿ ತಾಲೂಕು ದಂಡಾಧಿಕಾರಿ ಡಾ.ಮೋಹನ ಭಸ್ಮೆ ಮಾತನಾಡಿದರು.

# ಸ್ತ್ರೀ ಸಬಲೀಕರಣವೇ ಸಮಾಜದ ಸಶಕ್ತೀಕರಣ: ಸಂಸದ

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ಜನ ಜಾಗೃತಿ ಸಮಾವೇಶಕ್ಕೆ ಡಾ.ಸಿ.ಎನ್.ಮಂಜುನಾಥ್ ಚಾಲನೆ



# ಹಾಲಸಿದ್ದೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ವಿವಿಧ ಕಾರ್ಯಕ್ರಮಗಳು

ರಾಯಬಾಗ: ತಾಲೂಕಿನ ಕಂಕಣವಾಡಿಯಲ್ಲಿ ಪ್ರತಿ ವರ್ಷದಂತೆ ದಿನಾಂಕ 2/10/2025 ರಿಂದ 8/10/2025ರವರೆಗೆ ನಡೆಯುವ ಶ್ರೀ ಹಾಲಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ...

ಕರ್ನಾಟಕ ಟೈಮ್ಸ್



# ಯುವಕರು ದುಶ್ಚಟಗಳಿಗೆ ದಾಸರಾಗಿದ್ದಾರೆ



ಇಂದಿನ ಯುವಜನಾಂಗ ದುಶ್ಚಟಗಳ ದಾಸರಾಗಿ 20ರ ವಯೋಮಾನದವರೂ ವ್ಯಸನಗಳಿಗೆ ಬಲಿಯಾಗಿರುವುದು ನೋವಿನ ಸಂಗತಿ ಎಂದು ಕಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಇವರ ವತಿಯಿಂದ ನಗರದ ವಿವೇಕಾನಂದ ರಂಗಮಂದಿರದಲ್ಲಿ ನಡೆದ ಗಾಂಧೀ ಜಯಂತಿ ಸಂಭ್ರಮಾಚರಣೆ ಪ್ರಯುಕ್ತ ಗಾಂಧೀಸ್ಮೃತಿ ಮತ್ತು ನವಜೀವನ ಸಮಿತಿ ಸದಸ್ಯರ ಸಮಾವೇಶ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

# ಗಾಂಧಿಸ್ಮೃತಿ, ನವಜೀವನ ಸಮಿತಿ ಸದಸ್ಯರ ಸಮಾವೇಶ

ಮಂಡ್ಯ: ಇಂದಿನ ಯುವಜನಾಂಗ ದುಶ್ಚಟಗಳ ದಾಸರಾಗಿ 20ರ ವಯೋಮಾನದವರೂ ವ್ಯಸನಗಳಿಗೆ ಬಲಿಯಾಗಿರುವುದು ನೋವಿನ ಸಂಗತಿ ಎಂದು ಕಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದ ನಾಥಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ವತಿಯಿಂದ ನಗರದ ವಿವೇಕಾನಂದ ರಂಗಮಂದಿರದಲ್ಲಿ ನಡೆದ ಗಾಂಧಿ ಜಯಂತಿ ಸಂಭ್ರಮಾಚರಣೆಯ ಪ್ರಯುಕ್ತ ಗಾಂಧಿಸ್ಮೃತಿ ಮತ್ತು ನವಜೀವನ ಸಮಿತಿ ಸದಸ್ಯರ ಸಮಾವೇಶ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು. ಶ್ರೀಕ್ಷೇತ್ರ ಧರ್ಮಸ್ಥಳದ ಮೂಲಕ ವೀರೇಂದ್ರ ಹೆಗ್ಗಡೆಯವರು ಸಂವಿಧಾನದ ಆಶಯಗಳಾದ ಜಾತ್ಯತೀತ, ಧರ್ಮಾತೀತ, ಪ್ರದೇಶಾತೀತ, ಲಿಂಗಾತೀತ ಹಾಗೂ ಭಾಷಾತೀತ ಅಭಿವೃದ್ಧಿಗೆ ಸಹಕಾರಿಯಾಗುವ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ ಎಂದರು.

ಶಾಸಕ ಪಿ. ರವಿಕುಮಾರ್ ಸಮಾರಂಭ ಉದ್ಘಾಟಿಸಿದರು. ಜಿಲ್ಲಾ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಹನುಮಂತಯ್ಯ ಕೋಣನೂರು, ಉಪಾಧ್ಯಕ್ಷ ಶ್ರೀಕಂಠಸ್ವಾಮಿ, ಕೋಶಾಧಿಕಾರಿ ಚಂದ್ರು, ಕಾರಸವಾಡಿ ಮಹದೇವು, ಸುಜಾತ ಕೃಷ್ಣ, ಜಿಲ್ಲಾ ಯೋಜನಾಧಿಕಾರಿ ಚೇತನಾ, ತಾಲೂಕು ಯೋಜನಾಧಿಕಾರಿ ಸುರೇಶ್‌ಶೆಟ್ಟಿ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಗಾಂಧೀ ಸ್ಮೃತಿ ಕಾರ್ಯಕ್ರಮ

ಹೊಯ್ಸಳ ದಿನಪತ್ರಿಕೆ



ವಿಜಯ ಕರ್ನಾಟಕ

## ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಕಾರ್ಯವೈಖರಿಗೆ ಶಾಸಕ ಸಿಪಿವೈ ಶ್ಲಾಘನೆ

# ಜನಪರ ಕಾರ್ಯಗಳಿಗೆ ಸದಾ ಬೆಂಬಲ

■ ವಿಕ ಸುದ್ದಿಲೋಕ ಚನ್ನಪಟ್ಟಣ



Main Edition
Oct 08, 2025 Page No. 1

# ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಜನರಲ್ಲಿ ಹೊಸ ಶಕ್ತಿಯನ್ನು ತುಂಬಿದೆ– ಶಾಸಕ ಸಿಪಿವೈ





08-10-2025 ಕಲಾಪ್ರಿಯ 4

## ಜನಜಾಗೃತಿ ಸಮಾವೇಶದಲ್ಲಿ ಶಾಸಕ ಪಿ.ಯೋಗೇಶ್ವರ್ ಅಭಿಮತ

# ಸ್ವಉದ್ಯೋಗಕ್ಕೆ ಆರ್ಥಿಕ ಸಹಕಾರ – ಬಡವರ ಸ್ವಾಭಿಮಾನ ಬದುಕಿಗೆ ಬೆಳಕು



# ವ್ಯಸನವಿಲ್ಲದ ದೇಹ ಜೋಪಾನದಿಂದ ಕಾಪಾಡಿ



# ವ್ಯಸನ ಮುಕ್ತ ಕುಟುಂಬ ಉತ್ತಮ ದಾರಿಯಲ್ಲಿ ಹೋಗಲು ಸಹಕಾರಿ



**ಹಾಸನವಾಣಿ**

## 3 ನೇ ದಿವಸದ ಮದ್ಯವರ್ಜನ ಶಿಬಿರದಲ್ಲಿ ಟಿ. ಮಾಯಿಗೌಡನಹಳ್ಳಿ ಶ್ರೀಗಳ ಸಲಹೆ.

ರಾಮನಾಥಪುರ– ಕುಟುಂಭದಲ್ಲಿ ಬರುವ ಸಂಕಷ್ಟ, ಸುಧಾರಣೆ, ಪ್ರಗತಿ, ಸಂಸ್ಕೃತಿ, ಉನ್ನತ ವ್ಯಕ್ತಿಯಾಗಿ ರೂಪಿಸುವ ಸಾಮರ್ಥ್ಯದಲ್ಲಿ ಸ್ತ್ರೀಯರ ಪಾತ್ರವಾಗಿದ್ದು, ಇದಕ್ಕೆ ಪುರುಷರು ಸಹ ಮದ್ಯವರ್ಜನ, ವ್ಯಸನ ಮುಕ್ತಿ ಮಾಡಿ ಉತ್ತಮ ಸಹಕಾರ ನೀಡಿದರೆ ಕುಟುಂಭ ಉತ್ತಮ ದಾರಿಯಲ್ಲಿ ಹೋಗಲು ಸಹಕಾರಿಯಾಗುತ್ತದೆ ಎಂದು ಟಿ. ಮಾಯಿಗೌಡನಹಳ್ಳಿ ರಾಜಾಪುರ ಮಠದ ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಜಿಗಳು ತಿಳಿಸಿದರು.

ರಾಮನಾಥಪುರದ ಕಾವ್ಯಾಂಜಲಿ ಕಲ್ಯಾಣ ಮಂಟಪದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ವತಿಯಿಂದ 3 ನೇ ದಿವಸದ ಮದ್ಯವರ್ಜನ ಶಿಬಿರದ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅರ್ಶಿವಚನ ನೀಡಿದ ಅವರು ಧರ್ಮಸ್ಥಳದ ಪರಮಪೂಜ್ಯ ಡಾ. ಶ್ರೀ ವೀರೇಂದ್ರ ಹೆಗ್ಗಡೆಯವರು ಕರ್ನಾಟಕದಲ್ಲಿ ಈಗಾಗಲೇ 1993 ಮದ್ಯವರ್ಜನ ಶಿಬಿರ ಹಮ್ಮಿಕೊಂಡುಮದ್ಯವರ್ಜನ ವ್ಯಸನ ಮುಕ್ತಿ ಮಾಡಲು ಇಂತಹ ಕಾರ್ಯಕ್ರಮ ಮಾಢಿಕೊಂಡು ಬಂದಿದ್ದಾರೆ. ಇಂತಹ ದುಶ್ಚಟ ಮುಕ್ತ ಸಮಾಜದ ನಿರ್ಮಾಣ ನಿಮ್ಮೆಲ್ಲರ ಹೊಣೆ ಇದೆ. ಇಂತಹ ಮದ್ಯವ್ಯಸನ ದೂರಮಾಡಲು ಧರ್ಮಸ್ಥಳ ಜನಜಾಗೃತಿ ವೇದಿಕೆ, ಸ್ವ– ಸಹಾಯ ಸಂಘಗಳ ಒಕ್ಕೂಟಗಳು ವ್ಯಸನ ಮುಕ್ತಿ ಇನ್ನಿತರ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿರುವುದಕ್ಕೆ ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಅರಕಲಗೂಡು ತಾಲ್ಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷರು ಎ.ಪಿ. ಶಂಕರ್ ಅವರು ಮಾತನಾಡಿ ಶ್ರೀಕ್ಷೇತ್ರ ಧರ್ಮಸ್ಥಳದ ವ್ಯವಸ್ಥಾಪನಾ ಸಮಿತಿಯಿಂದ ಮದ್ಯಸರ್ಜನ ವ್ಯಸನ ಮುಕ್ತಿ ಕಾರ್ಯಕ್ರಮ ಮಾಡಿಕೊಂಡು ಬರುತ್ತಿದ್ದು, ಇದಕ್ಕೆ ತಮ್ಮ ಎಲ್ಲಾ ದುಚ್ಚಟಗಳನ್ನು ದೂರ ಮಾಡಿ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ನಮ್ಮ ನಿಮ್ಮೆಲ್ಲರ ಹೊಣೆಯ ಜೊತೆಯಲ್ಲಿ ಸುಖಿ ಸಂಸ್ಕಾರದಲ್ಲಿ ನಡೆಯಿರಿ ಎಂದು ಕಿವಿ ಮಾತು ಶಂಕರ್ ಹೇಳಿದರು.

ಈ ಸಂದರ್ಭದಲ್ಲಿ ಸಮಿತಿಯ ಗೌರವಧ್ಯಕ್ಷರು ಅರ್.ಎಸ್. ನರಸಿಂಹಮೂರ್ತಿ, ಶರಣ ಸಾಹಿತ್ಯ ಪರಿಷತ್ತು ನಿರ್ಧಶಕರು ಜಿಲ್ಲಾಧ್ಯಕ್ಷರು ಎಂ.ಎನ್. ಕುಮಾರಸ್ವಾಮಿ, ವಿರುಪಾಕ್ಷ, ಸಿದ್ದರಾಜು ಮುಂತಾದವರು ಇದ್ದರು.

## ಮದ್ಯವ್ಯಸನದಿಂದ ಕೌಟುಂಬಿಕ–ಸಾಮಾಜಿಕ ಸಮಸ್ಯೆಗಳು ತಲೆದೋರುತ್ತವೆ

**ವೈಚಾರಿಕ** ಸಂಜೆ ದಿನಪತ್ರಿಕೆ

## ನಾಳೆ ಸಕಲೇಶಪುರದಲ್ಲಿ ಜನಜಾಗೃತಿ ಜಾಥಾ ಹಾಗೂ ಸಮಾವೇಶ ಕಾರ್ಯಕ್ರಮ

ವೈಚಾರಿಕ ವಾರ್ತೆ,ಸಕಲೇಶಪುರ : ನಾಳೆ ದಿನಾಂಕ :– 14/10/2025 ನೇ ಮಂಗಳವಾರ ಬೆಳಗ್ಗೆ: 10 ಗಂಟೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ (ರಿ),ಸಕಲೇಶಪುರ ಅಖಿಲ ಕರ್ನಾಟಕ ಜಿಲ್ಲಾ ಜನ ಜಾಗೃತಿ ವೇದಿಕೆ ಹಾಸನ ಜಿಲ್ಲೆ,ಲಯನ್ಸ್ ಕ್ಲಬ್ ಸಕಲೇಶಪುರ. ರೋಟರಿ ಕ್ಲಬ್ ಸಕಲೇಶಪುರ,ಆರೋಗ್ಯ ಇಲಾಖೆ ಸಕಲೇಶಪುರ,ಹಾಸನ ಜಿಲ್ಲಾ ಬಂಟರ ಸಂಘ ಹಾಗೂ ಸರ್ಕಾರಿ ಕೈಗಾರಿಕ ತರಬೇತಿ ಸಂಸ್ಥೆ ಸಕಲೇಶಪುರ ಇದರ ಸಹಯೋಗದಲ್ಲಿ ಪರಮ ಪೂಜ್ಯ ಡಾ॥ ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆಯವರ ಕೃಪಾಶೀರ್ವಾದಗಳೊಂದಿಗೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ 156ನೇ ಜಯಂತಿಯ ಪ್ರಯುಕ್ತ " ಗಾಂಧಿ ಸ್ಮರಣೆ: ಜನಜಾಗೃತಿ ಜಾಥಾ ಮತ್ತು ಸಮಾವೇಶ "ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 10ಗಂಟೆಗೆ ಸಕಲೇಶಪುರ ತಾಲೂಕಿನ ಸಕಲೇಶ್ವರಸ್ವಾಮಿ ದೇವಸ್ಥಾನದದಿಂದ ಪುರಭವನ ಸಕಲೇಶಪುರದ ವರೆಗೆ ದುಶ್ಚಟಗಳ ವಿರುದ್ಧ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜನಜಾಗೃತಿ ಜಾಥಾ ಹಾಗೂ ಸಮಾವೇಶ ನೆಡೆಯಲಿದೆ.

ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ.

## ಗಾಂಧಿಯವರ ಸತ್ಯ, ಅಹಿಂಸಾ ತತ್ವ ಅಳವಡಿಸಿಕೊಳ್ಳಿ

## ‘ವ್ಯಸನಮುಕ್ತ ಸಮಾಜಕ್ಕೆ ಕೈಜೋಡಿಸಿ’

ದುಶ್ಚಟ ಕುಟುಂಬ-ಸಮಾಜಕ್ಕೆ ಮಾರಕ । ಉತ್ತಮ ವ್ಯಕ್ತಿಗಳಾಗಿ ಬದುಕು ನಡೆಸಿ । ಜನ ಜಾಗೃತಿ ಸಮಾವೇಶಕ್ಕೆ ಚಾಲನೆ

**ಉದಯಕಾಲ**

## ವ್ಯಸನಮುಕ್ತ ಭಾರತ ನಿರ್ಮಾಣ ನಮ್ಮೆಲ್ಲರ ಕನಸು: ತಮ್ಮಯ್ಯ

## ವ್ಯಸನಮುಕ್ತ ಭಾರತ ನಿರ್ಮಾಣ ನಮ್ಮೆಲ್ಲರ ಕನಸು : ಶಾಸಕ ತಮ್ಮಯ್ಯ



**ಪ್ರಜಾ ಪ್ರಗತಿ**

## ಗ್ರಾಮಾಭಿವೃದ್ಧಿ ಯೋಜನೆ ಕಾರ್ಯಕ್ರಮ ದೇಶಕ್ಕೆ ಮಾದರಿ

## ವ್ಯಸನ ಮುಕ್ತ ಭಾರತ ನಿರ್ಮಾಣ ನಮ್ಮೆಲ್ಲರ ಕನಸು:ಶಾಸಕ ತಮ್ಮಯ್ಯ

**ವಿಜಯನಗರ ವಾಣಿ**

## ಸ್ವಾಸ್ಥದಿಂದ ಗಳಿಸಿದ ವಿದ್ಯೆ ಉತ್ತಮ ಜೀವನದ ಸಂಕಲ್ಪ : ತಾಲೂಕು ಯೋಜನಾಧಿಕಾರಿ ಸುಧೀರ್ ಹಂಗಳೂರು

**ವಿಜಯವಾಣಿ** ಚಿಕ್ಕಮಗಳೂರು

## ವ್ಯಸನಮುಕ್ತ ಭಾರತ ನಿರ್ಮಾಣ ನಮ್ಮೆಲ್ಲರ ಕನಸು

**ವಿಜಯ ಕರ್ನಾಟಕ**

ಮದ್ಯವರ್ಜನ ಶಿಬಿರ ಉದ್ಘಾಟನೆಯಲ್ಲಿ ಡಾ.ಪ್ರಕಾಶ ಭಟ್ ಆಶಯ

## ಸರಕಾರ ಮದ್ಯಪಾನ ನಿಷೇಧ ಮಾಡಲಿ

## ಗುಂಡ್ಲುಪೇಟೆಯಲ್ಲಿ ಜನಜಾಗೃತಿ ಜಾಥಾ

**ಸಂಯುಕ್ತ ಕರ್ನಾಟಕ** ಸೋಮವಾರ, 17, ನವೆಂಬರ್, 2025 03

## ಧರ್ಮಸ್ಥಳ ಸಂಸ್ಥೆಯ 2008ನೇ ಮದ್ಯವರ್ಜನ ಶಿಬಿರ ಸಮಾರೋಪ

## ವೀರೇಂದ್ರ ಹೆಗ್ಗಡೆ ಬಡವರ ಪಾಲಿನ ಆಶಾದೀಪ

**ಪ್ರಜಾವಾಣಿ**

1991ನೇ ಮದ್ಯವರ್ಜನ ಶಿಬಿರದ ಸಮಾರೋಪ, ಗಾಂಧಿ ಸ್ಮೃತಿ ಸಮಾರಂಭ

## ‘ಮದ್ಯಪಾನ ತ್ಯಜಿಸಿ ಸಮಾಜಕ್ಕೆ ಮಾದರಿಯಾಗಿ’

## ಸರ್ಕಾರಿ ಪ್ರೌಢಶಾಲೆಯಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ



ತೊಂಡೇಬಾವಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಕಲ್ಯಾಣ ಮಂಟಪದಲ್ಲಿ ಎಂಟು ದಿನಗಳ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭ ನಡೆಯಿತು. ಕೊರಟಗೆರೆ ಕುಂಚಿಟಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀಹನುಮಂತನಾಥ ಸ್ವಾಮೀಜಿ, ಜನಜಾಗೃತಿ ವೇದಿಕೆ ಪ್ರಾದೇಶಿಕ ವಿಭಾಗದ ಯೋಜನಾಧಿಕಾರಿ ತಿಮ್ಮಯ್ಯ ನಾಯ್ಕ್, ಕೆ.ಎಂ.ಮುನೇಗೌಡ, ಸಿ.ಎಸ್ ಪ್ರಶಾಂತ್, ಕಾಂತರಾಜು, ಪ್ರಭಾಕರ್, ದಿನೇಶ್ ಕುಮಾರ್, ಪ್ರಶಾಂತ್, ಲಕ್ಷ್ಮೀ, ಪ್ರಭಾಕರ್, ಜಗನ್ನಾಥ್, ವಿದ್ಯಾಧರ್, ತುಷಾರಾ, ದರ್ಶನ್.ಎಂ.ಎಸ್ ಇದ್ದರು.

ಡಾ.ಡಿ.ವೀರೇಂದ್ರ ಹೆಗ್ಗಡೆ ಜನ್ಮದಿನ ಪ್ರಯುಕ್ತ ಸೇವೆ

## ಅನಾಥಾಶ್ರಮದಲ್ಲಿ ಹಣ್ಣು ವಿತರಣೆ



**ನಿರಂಜನಪ್ರಭ**

## ಅಕ್ರಮ ಮದ್ಯ ಮಾರಾಟ ತಡೆಯಲು ಸಂಯಮ ಮಂಡಳಿ ಶಕ್ತಿಯುತಕ್ರಮ




## ಕೊಟ್ಟಿಗೆಹಾರ ಸರ್ಕಾರಿ ಪ್ರೌಢಶಾಲೆಯಲ್ಲಿ ಧರ್ಮಸ್ಥಳದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ

**ಕನ್ನಡಪ್ರಭ**

## ಕೊಡಗು ಜಿಲ್ಲಾ ಜನಜಾಗೃತಿ ವೇದಿಕೆಯ ಸಭೆ

ಹುನ್ನಾರ ನಡೆಸಿರುವ ವ್ಯಕ್ತಿಗಳ ಮೇಲೆ ಕಠಿಣ ಕಾನೂನು ಕ್ರಮ: ನಟರಾಜ ಬಾದಾಮಿ



**जागृत लोकनेता**

## सेवा हाची धर्म : शौर्य पथक बेडकीहाळ



**ಮಹಾ ನಂದಿ**

## ನಂಜನಗೂಡಿನಲ್ಲಿ ಬಾಲಕಿಯರ ಪಿಯು ಕಾಲೇಜಿನಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ





**ಸುವರ್ಣ ಫೋಕಸ್** — Suvarna Focus Daily — ಬದಲಾವಣೆಗಾಗಿ ನಮ್ಮ ಫೋಕಸ್

## ಪಾನ ಮುಕ್ತ ಸದಸ್ಯರ ನವಜೀವನೋತ್ಸವ, ಕಾರ್ಯಕ್ರಮ
## ದುಶ್ಚಟಗಳಿಂದ ಮುಕ್ತರಾಗಿ, ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ : ಸತೀಶ್



February 10, 2026 | Page No: 2 | suvarnafocus.com



## ಡಾ. ವೀರೇಂದ್ರ ಹೆಗ್ಗಡೆ ಜನ್ಮದಿನ ವೃದ್ಧರಿಗೆ ಹಣ್ಣು ಹಂಪಲು ವಿತರಣೆ

**ಕರ್ನಾಟಕ ಟೈಮ್ಸ್** — ಪುಟ – 5

## ಪಾನಮುಕ್ತ ನವಜೀವನ ಸಮಿತಿ ಸದಸ್ಯರ ನವಜೀವನೋತ್ಸವ



ಫಕೀರೇಶ್ವರ ಸ್ವಾಮೀಜಿ ಅಭಿಪ್ರಾಯ | ಕೈತನಾಳದಲ್ಲಿ ಮದ್ಯವರ್ಜನ ಶಿಬಿರ ಸಮಾರೋಪ

## ವ್ಯಸನಮುಕ್ತ ಸಮಾಜ ನಿರ್ಮಿಸಲು ಸಹಕರಿಸಿ



ಕೈತನಾಳ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಮದ್ಯವರ್ಜನ ಶಿಬಿರದ ಸಮಾರೋಪದ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು.

**ಸಂಜೆ ವಾಣಿ**

Sanjevani / 2026-02-01, 7, Vijaypura

## ಜಿಲ್ಲಾಮಟ್ಟದ ಸ್ವಯಂಸೇವಕರ ತರಬೇತಿ



**ಪ್ರಜಾ ಪ್ರಗತಿ**

## ಯುವಕರು ದುಶ್ಚಟಗಳಿಂದ ದೂರಾಗಿ ಬದುಕು ಕಟ್ಟಿಕೊಳ್ಳಿ



● ಪ್ರಜಾಪ್ರಗತಿ.ಕಾಂ

ಕಲಘಟಗಿ: ವ್ಯಸನಮುಕ್ತ ಸಮಾಜ ನಿರ್ಮಾಣ ಮಾಡುವಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆಯ ಪಾತ್ರ ಬಹಳ ಮಹತ್ವದ್ದಾಗಿದೆ. ಎಷ್ಟು ಯುವಕರು ಹಿರಿಯರು ದುಶ್ಚಟದಿಂದ ಹೊರಗೆ ಬರಲಾರದೆ ಅಸಹಾಯಕರಾಗಿ ಸಮಾಜದ ಮುಂದೆ ನಿಂತಿದ್ದಾರೆ ಎಂದು ಜಿಲ್ಲಾ ನಿರ್ದೇಶಕರಾದ ಹನುಮಂತ ನಾಯ್ಕ್ ತಿಳಿಸಿದರು.

ಅವರು ಶುಕ್ರವಾರ ತಾಲೂಕಿನ ಲಿಂಗನಕೊಪ್ಪ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ನವಜೀವನೋತ್ಸವ ಹಾಗೂ ದುಶ್ಚಟ ವಿರುದ್ಧ ಮಾಹಿತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ದುಶ್ಚಟ ಗಳಿಂದ ಮುಕ್ತಿಗೊಳಿಸಿ ಕುಟುಂಬದ ಜೊತೆ ನವಜೀವನದೊಂದಿಗೆ ಸಮಾಜದ ಮುಖ್ಯ ವಾಹಿನಿಗೆ ತರುವ ಕೆಲಸವನ್ನು ನಾವೆಲ್ಲರೂ ಮಾಡುತ್ತಿದ್ದೇವೆ ಎಂದರು.

ಜನಜಾಗೃತಿ ಸದಸ್ಯರಾದ ಸುರೇಶ ಮರಲಿಂಗಣ್ಣನವರ ಮಾತನಾಡಿ, ವ್ಯಸನದಿಂದ ಹಲವು ಕುಟುಂಬಗಳು ಬೀದಿಗೆ ಬಂದಿವೆ. ಇವತ್ತಿನ ದಿನದಂದು ವ್ಯಸನದಿಂದ ಮುಕ್ತಿ ಪಡೆದು 82 ಜನ ಶಿಬಿರಾರ್ಥಿಗಳು ನವ ಜೀವನವನ್ನು ಕಂಡುಕೊಂಡಿದ್ದಾರೆ ಎಂದರು.

ಅಮರಾಸಿಂಗ ಜಯ ರಾಮನ್ನವರ, ಮಾಲೇಶಪ್ಪ ಕರಡಿಗುಡ್ಡ, ಪ್ರಶಾಂತ ನಾಯ್ಕ್, ಭಾಸ್ಕರ್, ಮಾದೇವಪ್ಪ ನೆರ್ಗಿ, ಕೆ.ಡಿ.ಹವೇಸರ, ಚನ್ನಬಸಪ್ಪ ಪೀರಣ್ಣವರ, ಶಿವಪ್ಪ ಬಡಿಗೇರ, ಮಲ್ಲೇಶಪ್ಪ ಅಡ್ಡಣ್ಣವರ, ಭೀಮಶಿ ಸುಳ್ಳದ, ಪೀರಪ್ಪ ದಾಸ್ತಿಕೊಪ್ಪ, ಮಂಜುನಾಥ ಬಡಿಗೇರ, ಜಗದೀಶ ನಿಗದಿ, ಬಸವರಾಜ ಕಲ್ಲೂರು, ಶಿವಪ್ಪ ಕಲ್ಲೂರು, ಮಂಜುನಾಥ ಪಾಟೀಲ್ ಇತರರಿದ್ದರು.

Hubli Edition
Feb 14, 2026 Page No. 2

## ಚೆನ್ನಭೈರಾದೇವಿ ಪಾರ್ಕ್‌ಗೆ ನಾವು ರೆಡಿ ಇದ್ದೇವೆ: ವೀರೇಂದ್ರ ಹೆಗ್ಗಡೆ





ವ್ಯಸನಮುಕ್ತ ಬದುಕಿಗೆ ಮಾರ್ಗದರ್ಶಿ
"ಮದ್ಯವರ್ಜನ ಶಿಬಿರ"
ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭ
ವ್ಯಸನಮುಕ್ತ ಬದುಕಿಗೆ ಮಾರ್ಗದರ್ಶಿ
ವಿಶೇಷ ಮದ್ಯವರ್ಜನ ಶಿಬಿರ
ಸ್ವಸ್ಥ ಸಮಾಜಕ್ಕಾಗಿ ಜನಜಾಗೃತಿ ವೇದಿಕೆ
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.)
ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ.)
36
1,026
5,728
2,536
30
61,800
1,886
94,22,885
267
17,144
2,046
1,37,043
24,126
20,57,624
4,363
1,403
737
2,86,526
1,754
3,100
917
ಗ್ರಾಮಾಭಿವೃದ್ಧಿ ಯೋಜನೆಯ ಕನಸುಗಾರರು
DHARMA IN ACTION
Shree Kshetra Dharmasthala Rural Development Project ®
NAVAJEEVAN COMMITTEE
SKDRDP Dharmasthala, established under the visionary leadership of Pujya Dr. D. Veerendra Heggade ji, is one of India's leading NGOs. For over four decades, the organisation has been dedicated to sustainable community development across Karnataka. To support individuals who have become free from addiction after participating in de-addiction camps and to prevent relapse, a Navjeevan Committee has been formed at the local level. Through regular follow-up, meetings, and programs such as Navjeevanotsava, Shatadinotsava, Family Celebrations, and Gandhi Jayanti, the committee encourages and motivates them to lead an addiction-free life.
3,100 Navjeevan Committees
74,200 Total Members
ಧರ್ಮಸ್ಥಳ ಸೇವಾ ದರ್ಶನ
ಸಾಮಾಜಿಕ ಅರಣ್ಯೀಕರಣ
8,812
16.97ಲಕ್ಷ
ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ
ವ್ಯಸನಮುಕ್ತ ಬದುಕಿಗೆ ಮಾರ್ಗದರ್ಶಿ
DHARMA IN ACTION
Shree Kshetra Dharmasthala Rural Development Project ®
SOCIAL FORESTRY
SKDRDP Dharmasthala, established under the visionary leadership of Dr. D. Veerendra Heggade ji, is one of India's leading NGOs. For over four decades, the organisation has been dedicated to sustainable community development across Karnataka. In forest fringe areas, wild animals are destroying farmers' crops in search of food, creating fear and leading to human–wildlife conflict. To prevent this and to protect both farmers and the environment, a Social Forestry programme has been launched to plant fruit-bearing trees in forests so that animals and birds can find sufficient food within the forest itself.
8,812
16.97 Lakh
ಶೌರ್ಯ ವಿಪತ್ತು ನಿರ್ವಹಣಾ ಸಮಿತಿಯ ಸಭೆ
ಧರ್ಮಸ್ಥಳ ಸೇವಾ ದರ್ಶನ
ನವಜೀವನ ಸಮಿತಿ
3,100
74,200
ಧರ್ಮಸ್ಥಳ ಸೇವಾ ದರ್ಶನ
ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ
23,952
20,11,780
ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ
ಸ್ವ-ಉದ್ಯೋಗ ಪ್ರೇರಣಾ ಶಿಬಿರ
1936 ನೇ ಮದ್ಯವರ್ಜನ ಶಿಬಿರ
ಧರ್ಮಸ್ಥಳ ಸೇವಾ ದರ್ಶನ
ಶೌರ್ಯ ವಿಪತ್ತು ನಿರ್ವಹಣಾ ಘಟಕ
91
10,460
ಕಾರ್ಯಕರ್ತರ ಪ್ರೇರಣಾ ಕಾರ್ಯಾಗಾರ
ಗ್ರಾಮಗಳ ಮೂಲ ಸೌಕರ್ಯಗಳ ಅಭಿವೃದ್ಧಿ
ನವಚೇತನ ಕಾರ್ಯಕ್ರಮ
ಧರ್ಮಸ್ಥಳ ಸೇವಾ ದರ್ಶನ
ಮದ್ಯವರ್ಜನ ಶಿಬಿರ
1,36,721
2,040




Phone: 08256-232133, 9448468332, 9611581332.
Email: janajagruthi@skdrdpindia.org,
Janajagruthi Website: http://dharmasthaladrc.com,
Shaurya Website: skdrdpdisastermanagement.org,
Facebook: Skdrdp Janajagrati and showrya program

ಸುರೇಂದ್ರ ಮ್ಯಾನ್ಷನ್ ಕಟ್ಟಡ
1ನೇ ಮಹಡಿ, ಕೆನರಾ ಬ್ಯಾಂಕ್ ಬಳಿ
ಮುಖ್ಯರಸ್ತೆ, ಬೆಳ್ತಂಗಡಿ
ದ.ಕ. ಜಿಲ್ಲೆ– 574214

ಮಂಜುಶ್ರೀ ಪ್ರಿಂಟರ್ಸ್, ಉಜಿರೆ